# ಆಹಾ ಸುದ್ದಿ!

★ ಸಸಿತೋಟ




ಚೀನಾದ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ 7ನೇ ಶತಮಾನದ ತಾಂಗ್ ರಾಜಮನೆತನದ ಖ್ಯಾತ ರಾಣಿಯ ಕುರಿತ ಧಾರಾವಾಹಿಗೆ ವರ್ಷಾಂತ್ಯದಲ್ಲಿ ನಾಲ್ಕು ದಿನಗಳ ಬಿಡುವು ನೀಡಲಾಯಿತು. ಆಳವಾದ ಕತ್ತು, ಬಿಗಿ ಉಡುಪಿನಿಂದ ಶೋಭಿಸುತ್ತಿದ್ದ ಮಹಿಳಾ ಪಾತ್ರಧಾರಿಗಳಿಗೆ ಹೊಸ ವರ್ಷದಲ್ಲಿ ಹೊಸ ಲುಕ್ ನೀಡಲಾಗಿದ್ದು, ಕತ್ತಿನ ಮೇಲ್ಭಾಗವನ್ನು ಕ್ಲೋಸ್‌ಅಪ್‌ನಲ್ಲಿ ತೋರಿಸಲಾಗುತ್ತಿದೆಯಂತೆ. ನಾಲ್ಕು ದಿನಗಳಲ್ಲಿ ಅದೇನು ಜ್ಞಾನೋದಯವಾಯಿತೋ!



ಅಮೆರಿಕದಲ್ಲಿ ಬೊಜ್ಜು ಸಮಸ್ಯೆ ಹೆಚ್ಚುತ್ತಿದ್ದು, ಸಾಕು ನಾಯಿಗಳನ್ನೂ ಇದು ಕಾಡುತ್ತಿದೆ. ಈ ನಾಯಿ 'ಕೇಲ್ ಚಿಪ್ಸ್' ಬರೋಬ್ಬರಿ 85 ಪೌಂಡ್ ತೂಗುತ್ತಿದೆಯಂತೆ. ಸಾಧಾರಣ 22-25 ಪೌಂಡ್ ತೂಗಬೇಕಿದ್ದ ನಾಯಿ ಈ ಪರಿ ತೂಕ ಏರಿಸಿಕೊಂಡಿದ್ದಕ್ಕೆ ಅದರ ಜೀವನಶೈಲಿ ಕಾರಣವಂತೆ. ನಾಯಿಗಳ ತೂಕ ಇಳಿಸುವ ಜಿಮ್‌ಗಳು ಅಲ್ಲಿ ತಲೆ ಎತ್ತುತ್ತಿದ್ದು, ಉದ್ಯೋಗಾವಕಾಶಗಳು ಯಾರ್ಯಾರಿಗೆ ಜಾಸ್ತಿ ಆಗುತ್ತಿವೆಯೋ!

ಕಳೆದ 25 ವರ್ಷಗಳಿಂದ ಕರ್ತವ್ಯಕ್ಕೆ ಹಾಜರಾಗದ ಕೇಂದ್ರದ ಲೋಕೋಪಯೋಗಿ ಇಲಾಖೆಯ ಇಲೆಕ್ಟ್ರಿಕಲ್ ಎಂಜಿನಿಯರ್ ಎ.ಕೆ.ವರ್ಮಾನನ್ನು ಸರ್ಕಾರ ಕೊನೆಗೂ ವಜಾಗೊಳಿಸಿದೆ. 1990ರ ಡಿಸೆಂಬರ್‌ನಿಂದ ಅನಧಿಕೃತ ರಜೆಯಲ್ಲಿದ್ದ ವರ್ಮಾ ವಿಚಾರಣೆಗೂ ಹಾಜರಾಗದೇ ತಪ್ಪಿಸಿಕೊಂಡಿದ್ದ. ನಗರಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಈ ವಜಾ ಆದೇಶ ನೀಡಿದ್ದಾರಂತೆ. ವರ್ಮಾ ಪ್ರಕರಣಕ್ಕೆ ರಜತ ಮಹೋತ್ಸವ ಆಚರಿಸಿಕೊಳ್ಳುವ ಯೋಗ ಇತ್ತು ಎನಿಸುತ್ತದೆ.

ಅಮೆರಿಕಾದಲ್ಲಿ ಕಳೆದ 16 ವರ್ಷಗಳಿಂದ ಜೈಲಿನಲ್ಲಿದ್ದ ಕ್ಯೂಬಾ ಗೂಢಚಾರ ಜೆರಾರ್ಡ್ ಎಂಬಾತನ ಪತ್ನಿ ಕ್ಯೂಬಾದಲ್ಲಿ ಗರ್ಭಿಣಿಯಾಗಿದ್ದಾಳಂತೆ. ಈ ಕೃತಕ ಗರ್ಭಧಾರಣೆಗೆ ನೆರವು ನೀಡಿ ಬೆನ್ನು ತಟ್ಟಿಸಿಕೊಂಡಿದ್ದು ಅಮೆರಿಕ ಸರ್ಕಾರ. ಜೆರಾರ್ಡ್ ವೀರ್ಯವನ್ನು ಕ್ಯೂಬಾಗೆ ಕಳಿಸಿ ಆತನಿಗೆ ಸಂತಾನ ಭಾಗ್ಯ ನೀಡಿದೆಯಂತೆ. ಜೊತೆಗೆ ಈಗ ಜೆರಾರ್ಡ್‌ನನ್ನೂ ಬಿಡುಗಡೆ ಮಾಡಿದೆ. ಮಗುವಿಗೆ 'ರಿಮೋಟ್ ಕಂಟ್ರೋಲ್ ಮೂಲಕ ಹುಟ್ಟಿದ ಬೇಬಿ' ಎಂದು ಕರೆಯಬಹುದು.



ಕೆನಡಾದ ಮ್ಯಾಥ್ಯೂ ಮೈಗೆ ಚುಚ್ಚಿಸಿಕೊಂಡ ಸರ್ಜಿಕಲ್ ಸೂಜಿಗಳ ಒಟ್ಟು ಸಂಖ್ಯೆ 4550. ಈ ಹಿಂದೆ 3900 ಸೂಜಿಗಳನ್ನು ಚುಚ್ಚಿಸಿಕೊಂಡವನ ದಾಖಲೆಯನ್ನು ಮುರಿದ ಈತ ಕೆನಡಾದಲ್ಲಿ ಯುವಜನತೆ ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ಈ ಸಾಹಸ ಮಾಡಿದ್ದಾನಂತೆ. ಉದ್ದೇಶ ಒಳ್ಳೆಯದೇ. ಆದರೆ ಚುಚ್ಚಿಸಿಕೊಳ್ಳುವುದಕ್ಕಿಂತಲೂ ಕೀಳುವಾಗ ಅನುಭವಿಸಿದ ನೋವೇ ಜಾಸ್ತಿ ಎಂದಿದ್ದಾನೆ ಮ್ಯಾಥ್ಯೂ. ಸಮಸ್ಯೆ ನಿವಾರಣೆಯಾಗುವಾಗಲೂ ನೋವು ಕೊಟ್ಟೇ ಹೋಗುತ್ತದೆ ಅಲ್ಲವೇ!



ಫಿಲಿಪ್ಪೀನ್ಸ್‌ಗೆ ಪೋಪ್ ಅವರು ಭೇಟಿ ಕೊಡಲಿದ್ದು ಭರದಿಂದ ತಯಾರಿ ನಡೆಯುತ್ತಿದೆಯಂತೆ. ಟ್ರಾಫಿಕ್ ವಾರ್ಡನ್‌ಗಳು ತಮ್ಮ ಜಾಗದಲ್ಲೇ ನಿಂತಿರುವುದನ್ನು ಖಚಿತಪಡಿಸಿಕೊಳ್ಳಲು ಈ ನ್ಯಾಪ್‌ಕಿನ್ ವಿತರಿಸಲಾಗಿದೆಯಂತೆ. ಕರ್ತವ್ಯದ ಮಧ್ಯೆ ನಿಸರ್ಗದ ಕರೆಗೂ ಸ್ಥಳದಲ್ಲೇ ಓಗೊಡಬೇಕು.